ಕಾರ್ಖಾನೆಯಿದ್ದರೂ ಬೆಲ್ಲದ ಬೇಡಿಕೆಯಿಂದ ಆಲೆಮನೆಗಳು ಉಳಿದುಕೊಂಡಿವೆ. ಅಲ್ಲಿ ಹೊಸಮಳೆಗೆ ಎರೆಹೊಲದಲ್ಲಿ ನಿಂತಿರುವ ನೀರಿನಂತೆ ತೋರುವ ಕಬ್ಬಿನಹಾಲು, ಕಡಾಯಿ ಕೆಳಗಿನ ಧಗಧಗ ಶಾಖಕ್ಕೆ ಕುದಿಯುವುದನ್ನು ನೋಡಬಹುದು. ಈ ಕುದಿತದಿಂದ ಹುಟ್ಟುವ ಪರಿಮಳವು ಹಾದಿಹೋಕರ ನಾಸಿಕಾಗ್ರಕ್ಕೆ ಏರಿ ಆಹ್ಲಾದ ಉಂಟುಮಾಡುತ್ತದೆ. ರಸವು ಚೆನ್ನಾಗಿ ಕುದ್ದು ಪಾಕ ಹದಕ್ಕೆ ಬರುವ ಹೊತ್ತಲ್ಲಿ ಹೊಮ್ಮುವ ಪರಿಮಳವಂತೂ ಮಾದಕತೆಯಿಂದ ನಶೆಯೇರಿಸುತ್ತದೆ. ಜೋನಿ ಬೆಲ್ಲವು ಮಾದಕ ಪಾನೀಯ ತಯಾರಿಸಲು ಮೂಲವಸ್ತು ಆಗಿರುವುದು ಸರಿಯಾಗಿಯೇ ಇದೆ. ಇಂತಹ ಬೆಲ್ಲಕ್ಕೆ ಮೂಲವಾಗಿರುವ ಕಬ್ಬನ್ನು ತನ್ನ ಹೆದೆಯನ್ನಾಗಿ ಮಾಡಿಕೊಂಡ ಮನ್ಮಥನದು ಕೂಡ ನಶೆಯೇರಿಸುವ ಕಾಯಕ ತಾನೇ? (ಇಲ್ಲಿನ ಊರುಗಳಲ್ಲಿ ಮನ್ಮಥಕೇರಿ ಹೆಸರಿನ ಬೀದಿಗಳೂ ಇವೆ). ವಿರೂಪಾಕ್ಷನು ಹಣೆಗಣ್ಣ ಬೆಂಕಿಯಿಂದ ತನ್ನನ್ನು ದಹಿಸಿದ್ದಕ್ಕೆ ಮುಯ್ಯಿ ತೀರಿಸಲು, ಕಾಮನು ಹಂಪಿಕ್ಷೇತ್ರದ ಸುತ್ತ ಇಕ್ಷುದಂಡಗಳನ್ನು ಬೆಳೆಸುವ ಹೂಟಹೂಡಿದನೊ ಎಂಬಂತೆ, ಹಂಪಿರೋಡಿನುದ್ದಕ್ಕೂ ಹಸಿರು ಚಾಪೆಯಂತೆ ಹಾಸಿಕೊಂಡಿರುವ ಕಬ್ಬಿನ ಗದ್ದೆಗಳಿವೆ. ಅವುಗಳಂಚಿಗೆ ತಾಕಿಕೊಂಡು

